# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1408
ಸದಸ್ಯರ ಹೆಸರು : ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 09-03-2022
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ] | ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ ನಮೂನೆ-50 ಮತ್ತು 53ರಲ್ಲಿ 2003-04 ಬಗರ್ ಹುಕ್ಕುಂ ಸಮಿತಿಯಲ್ಲಿ ಅನುಮೋದನೆಗೊಂಡು, ಸಾಗುವಳಿ ಚೀಟಿಯನ್ನು ಎಷ್ಟು ಜನ ರೈತರಿಗೆ ನೀಡಲಾಗಿದೆ; (ವಿವರವಾದ ಮಾಹಿತಿ ನೀಡುವುದು) | ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ ನಮೂನೆ-50 ಮತ್ತು 53ರಡಿ 2003-04ನೇ ಸಾಲಿನಲ್ಲಿ ಬಗರ್ ಹುಕ್ಕುಂ ಸಮಿತಿಯಲ್ಲಿ ಒಟ್ಟು 35 ಪ್ರಕರಣಗಳು ಅನುಮೋದನೆಗೊಂಡಿದ್ದು, ಈ ಪೈಕಿ 24 ಜನ ರೈತರಿಗೆ ಸಾಗುವಳಿ ಚೀಟಿಯನ್ನು ನೀಡಲಾಗಿರುತ್ತದೆ. |
| ಆ] | ಇಲ್ಲಿಯವರೆಗೂ 24 ಜನ ರೈತರು ಸಾಗುವಳಿ ಚೀಟಿಯನ್ನು ಪಡೆದಿದ್ದು, ಇನ್ನುಳಿದ ರೈತರಿಗೆ ನೀಡದಿರಲು ಕಾರಣವೇನು; ಯಾವಾಗ ವಿತರಣೆ ಮಾಡಲಾಗುವುದು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ಸಂಪೂರ್ಣ ಮಾಹಿತಿ ನೀಡುವುದು) | ಸಾಗುವಳಿ ಚೀಟಿಯನ್ನು ನೀಡಲು ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಶ್ರೀ ನಾರಾಯಣರೆಡ್ಡಿ ಮತ್ತು ಇತರೆ ಅರ್ಜಿದಾರರು ಆನೇಕಲ್ ತಾಲ್ಲೂಕು ಬಗರ್ ಹುಕ್ಕುಂ ಸಾಗುವಳಿ ಸಮಿತಿಯಲ್ಲಿ ದಿನಾಂಕ:21.07.2021, 09.01.2003, 04.09.2003, 03.02.2004, 03.04.2004, 03.01.2003, 28.08.2012, 10.07.2012 ಮತ್ತು 03.04.1993 ರಲ್ಲಿ ಆಗಿರುವ ತೀರ್ಮಾನದಂತೆ ಸಾಗುವಳಿ ಚೀಟಿ ವಿತರಣೆಗಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ:15077/2020 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ.<br><br>ಮಾನ್ಯ ಉಚ್ಚ ನ್ಯಾಯಲಯವು ರಿಟ್ ಅರ್ಜಿ ಸಂ:15077/2020ರಲ್ಲಿ ದಿನಾಂಕ:16.08.2021ರಂದು ಮಾಡಿರುವ ಆದೇಶದ ಸಾರಾಂಶ ಈ ಕೆಳಗಿನಂತಿದೆ.<br><br>"Tahsildar is bound by the resolution of the committee for regularization of unauthorized occupation; however it is open to seek cancellation of the said grant or regularization in terms of rule 108-k at the hands of the Asst. Commissioner, should there exist the grounds therefore." |

| | | |
|---|---|---|
| | | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂ:15077/2020ರ ದಿನಾಂಕ:16.08.2021ರ ಆದೇಶದ ವಿರುದ್ಧ ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಲು ಸರ್ಕಾರದ ಆದೇಶದ ಸಂ:ಆರ್‌ಡಿ 197 ಎಲ್‌ಜಿಎಕ್ಸ್ 2021, ದಿನಾಂಕ:30.12.2021ರಂತೆ ಆದೇಶ ಮಾಡಲಾಗಿರುತ್ತದೆ.<br><br>ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ವಕೀಲರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 15077/2020ರ ದಿನಾಂಕ:16.08.2021ರ ಆದೇಶದಂತೆ ಬಗರ್‌ಹುಕುಂ ಸಾಗುವಳಿಯ ನಿರ್ಣಯಗಳನ್ನು ರದ್ದುಪಡಿಸಲು ಕೋರಿ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108(ಕೆ)ರಡಿ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಕಾನೂನು ಅಭಿಪ್ರಾಯ ನೀಡಿರುತ್ತಾರೆ.<br><br>ಅದರಂತೆ, ಉಪ ವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ ರವರ ನ್ಯಾಯಾಲಯದ ಪ್ರಕರಣ ಸಂಖ್ಯೆ ಎಲ್‌ಎನ್‌ಡಿ/ಆರ್.ಎ(ಎ)/02/2021-22ರಂತೆ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108(ಕೆ)ರಡಿ ಪ್ರಕರಣ ದಾಖಲಿಸಲಾಗಿದ್ದು, ದಿನಾಂಕ:18.03.2022 ರಂದು ಪ್ರಕರಣವು ವಿಚಾರಣೆಗೆ ನಿಗದಿಯಾಗಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿ ಬಾಕಿ ಇರುತ್ತದೆ. |

ಸಂಖ್ಯೆ: ಆರ್‌ಡಿ 73 ಎಲ್‌ಜಿಕ್ಯೂ 2022

(ಆರ್. ಅಶೋಕ)
ಕಂದಾಯ ಸಚಿವರು.

ಚುಕ್ಕೆರಹಿತ ಪ್ರಶ್ನೆ ಸಂಖ್ಯೆ - 1408, ದಿ: 9/03/22.
ಸದಸ್ಯರ ಹೆಸರು :- ಶ್ರೀ ಆಯನೂರು ಮಂಜುನಾಥ

**ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ ಬಗರ್ ಹುಕುಂ ಸಮಿತಿಯಲ್ಲಿ ಅನುಮೋದನೆಗೊಂಡು ಸಾಗುವಳಿ ಚೀಟಿ ನೀಡುವ ಕುರಿತು ದಿನಾಂಕ:09.03.2022ರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1408ಗೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಮಾಹಿತಿ.**

ಪ್ರಶ್ನೆ:

(ಅ) ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ ನಮೂನೆ-50 ಮತ್ತು 53ರಡಿ 2003-04ನೇ ಸಾಲಿನಲ್ಲಿ ಬಗರ್ ಹುಕುಂ ಸಮಿತಿಯಲ್ಲಿ ಅನುಮೋದನೆಗೊಂಡ ಎಷ್ಟು ಜನ ರೈತರಿಗೆ ಸಾಗುವಳಿ ಚೀಟಿ ನೀಡಲಾಗಿದೆ.

(ಆ) ಇಲ್ಲಿಯವರೆಗೂ 24 ಜನ ರೈತರು ಸಾಗುವಳಿ ಚೀಟಿಯನ್ನು ಪಡೆದಿದ್ದು, ಇನ್ನೂಳಿದ ರೈತರಿಗೆ ನೀಡದಿರಲು ಕಾರಣವೇನು. ಯಾವಾಗ ವಿತರಣೆ ಮಾಡಲಾಗುವುದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು.

ಉತ್ತರ:

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ ನಮೂನೆ-50 ಮತ್ತು 53 ರಡಿ 2003-04ನೇ ಸಾಲಿನಲ್ಲಿ ಬಗರ್ ಹುಕ್ಕುಂ ಸಮಿತಿಯಲ್ಲಿ ಒಟ್ಟು 35 ಪ್ರಕರಣಗಳು ಅನುಮೋದನೆಗೊಂಡಿದ್ದು, ಈ ಪೈಕಿ 24 ಜನ ರೈತರಿಗೆ ಸಾಗುವಳಿ ಚೀಟಿಯನ್ನು ನೀಡಲಾಗಿರುತ್ತದೆ.

ಸಾಗುವಳಿ ಚೀಟಿಯನ್ನು ನೀಡಲು ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಶ್ರೀ ನಾರಾಯಣರೆಡ್ಡಿ ಮತ್ತು ಇತರೆ ಅರ್ಜಿದಾರರು ಆನೇಕಲ್ ತಾಲ್ಲೂಕು ಬಗರ್ ಹುಕ್ಕುಂ ಸಾಗುವಳಿ ಸಮಿತಿಯಲ್ಲಿ ದಿನಾಂಕ:21.07.2021, 09.01.2003, 04.09.2003, 03.02.2004, 03.04.2004, 03.01.2003, 28.08.2012, 10.07.2012 ಮತ್ತು 03.04.1993 ರಲ್ಲಿ ಆಗಿರುವ ತೀರ್ಮಾನದಂತೆ ಸಾಗುವಳಿ ಚೀಟಿ ವಿತರಣೆಗಾಗಿ ರಿಟ್ ಅರ್ಜಿ ಸಂ:15077/2020ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ.

ಮೇಲ್ಕಂಡಂತೆ ಬಗರ್ ಹುಕ್ಕುಂ ಸಾಗುವಳಿ ಸಮಿತಿ ಸಭೆಯಲ್ಲಿ ಮೇಲಿನ ದಿನಾಂಕದಂತೆ ಸಲ್ಲಿಕೆಯಾಗಿರುವ ನಮೂನೆ-50, 53ರಡಿ ಅರ್ಜಿಗಳನ್ನು ಅನುಮೋದಿಸಿ/ತಿರಸ್ಕರಿಸಿರುವ ಪ್ರಕರಣಗಳ ವಿವರ ಈ ಕೆಳಗಿನ ಅನುಬಂಧದಂತೆ ಇರುತ್ತದೆ.

| ಕ್ರಸಂ | ಅನಧಿಕೃತ ಸಾಗುವಳಿ ಸಕ್ರಮ ಸಮಿತಿ ಸಭೆಯ ದಿನಾಂಕ | ಅನುಮೋದನೆಗೊಂಡ ಪ್ರಕರಣಗಳ ಸಂಖ್ಯೆ | | ತಿರಸ್ಕೃತಗೊಂಡ ಪ್ರಕರಣಗಳ ಸಂಖ್ಯೆ | | ಸಮಿತಿಯಲ್ಲಿ ಮಂಡಿಸಿ, ಯಾವುದೇ ಕ್ರಮ ವಹಿಸದೆ ಇರುವ ಪ್ರಕರಣಗಳು | ತಿರಸ್ಕರಿಸಲು ಕಾರಣ |
|---|---|---|---|---|---|---|---|
| | | ನಮೂನೆ-50 | ನಮೂನೆ-53 | ನಮೂನೆ-50 | ನಮೂನೆ-53 | | |
| 1 | 03.04.1993 | 102 | – | 36 | – | 41 | ಸಾಗುವಳಿ ಇರುವುದಿಲ್ಲ. ಹಿಡುವಳಿ ಜಮೀನು, 18 ಕಿ.ಮೀ. ವ್ಯಾಪ್ತಿಗೆ ಒಳಪಡುವುದರಿಂದ ಪುರಸಭೆ ವ್ಯಾಪ್ತಿಯಿಂದ 5 ಕಿ.ಮೀ. ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಗೆ ಒಳಪಡುವುದರಿಂದ |
| 2 | 21.07.2001 | ವಹಿ ಇರುವುದಿಲ್ಲ. | | | | | |
| 3 | 03.01.2003 | ಸದರಿ ದಿನಾಂಕದಂದು ಸಮಿತಿ ಸಭೆ ನಡೆದಿರುವುದಿಲ್ಲ. | | | | | |
| 4 | 09.01.2003 | – | 13 | – | 687 | 41 | |
| 5 | 04.09.2003 | 6 | 16 | – | 44 | 3 | |
| 6 | 03.02.2004 | 1 | 118 | – | 202 | – | |
| 7 | 03.04.2004 | ಸದರಿ ದಿನಾಂಕದಂದು ಸಮಿತಿ ಸಭೆ ನಡೆದಿರುವುದಿಲ್ಲ. | | | | | |
| 8 | 10.07.2012 | ಸದರಿ ದಿನಾಂಕದಂದು ಸಮಿತಿ ಸಭೆ ನಡೆದಿರುವುದಿಲ್ಲ. | | | | | |
| 9 | 28.08.2012 | 2 | – | – | 368 | 295 | |
| | ಒಟ್ಟು | 111 | 147 | 36 | 1301 | 380 | |

ಮೇಲ್ಕಂಡ ಒಟ್ಟು 1975 ಪ್ರಕರಣಗಳ ಪೈಕಿ ಹಲವು ಪ್ರಕರಣಗಳಲ್ಲಿ ಈ ಕೆಳಗಿನಂತೆ ಕ್ರಮ ವಹಿಸಲಾಗಿದ್ದು, ಬಾಕಿ ಉಳಿದಿರುವ ಪ್ರಕರಣಗಳಾಗಿರುತ್ತದೆ.

- ✓ 87 ಪ್ರಕರಣಗಳಲ್ಲಿ ಅಧಿಕೃತ ಜ್ಞಾಪನ ಆಗಿದ್ದು, ಹಣ ಪಾವತಿಸಿದ್ದು, ಸಾಗುವಳಿ ಚೀಟಿಯನ್ನು ವಿತರಿಸಲು ಬಾಕಿ ಇರುತ್ತದೆ.
- ✓ 64 ಪ್ರಕರಣಗಳಲ್ಲಿ ಅಧಿಕೃತ ಜ್ಞಾಪನ ಆಗಿದ್ದು, ಚಲನ್ ಪಾವತಿಸದೆ ಸಾಗುವಳಿ ಚೀಟಿಯನ್ನು ವಿತರಿಸಲು ಬಾಕಿ ಇರುತ್ತದೆ.
- ✓ 35 ಪ್ರಕರಣಗಳಲ್ಲಿ ಅಧಿಕೃತ ಜ್ಞಾಪನ ಆಗಿದ್ದು, ಹಣ ಪಾವತಿಸಲು ನೋಟಿಸ್ ನೀಡಲಾಗಿದ್ದು, ಹಣ ಪಾವತಿಸಿರುವುದಿಲ್ಲ.
- ✓ 78 ಪ್ರಕರಣಗಳಲ್ಲಿ ಸಮಿತಿಯಿಂದ ಅನುಮೋದನೆಗೊಂಡು ಹಣ ಪಾವತಿಸಲು ನೋಟಿಸ್ ನೀಡಲು ಬಾಕಿ ಇರುತ್ತದೆ.
- ✓ 14 ಪ್ರಕರಣಗಳಲ್ಲಿ ಅಧಿಕೃತ ಜ್ಞಾಪನ ಆಗಿದ್ದು, ಹಣ ಪಾವತಿಸಿದ್ದು, ಸಾಗುವಳಿ ಚೀಟಿಯನ್ನು ವಿತರಿಸಿದ್ದು, ಸಾಗುವಳಿ ಚೀಟಿಯ ವಿತರಣಾ ವಹಿಯಲ್ಲಿ ಸಹಿಯಾಗದೆ ಬಾಕಿ ಇರುತ್ತದೆ.
- ✓ 289 ಪ್ರಕರಣಗಳಲ್ಲಿ ಸಮಿತಿಯಿಂದ ಅನುಮೋದನೆಗೊಂಡಿದ್ದು, ಅಧಿಕೃತ ಜ್ಞಾಪನ ಹೊರಡಿಸಲು ಬಾಕಿ ಇರುತ್ತದೆ.
- ✓ 18 ಪ್ರಕರಣಗಳಲ್ಲಿ ದರಖಾಸ್ತು ನಮೂನೆ-1ರಲ್ಲಿ ಮಂಜೂರಾಗಿ ಸಾಗುವಳಿ ಚೀಟಿ ನೀಡಲು ಬಾಕಿ ಇರುತ್ತದೆ.
- ✓ 109 ಪ್ರಕರಣಗಳಲ್ಲಿ ನ್ಯಾಯಾಲಯದ ಆದೇಶದಂತೆ ಸಾಗುವಳಿ ಚೀಟಿ ನೀಡಲು ಬಾಕಿ ಇರುತ್ತದೆ.

✓ ಮಾನ್ಯ ಉಚ್ಛ ನ್ಯಾಯಲಯವು ರಿಟ್ ಅರ್ಜಿ ಸಂ:15077/2020ರಲ್ಲಿ ದಿನಾಂಕ:16.08.2021ರಂದು ಮಾಡಿರುವ ಆದೇಶದಲ್ಲಿ

> "Tahsildar is bound by the resolution of the committee for regularization of unauthorized occupation; however it is open to seek cancellation of the said grant or regularization in terms of rule 108-k at the hands of the Asst. Commissioner, should there exist the grounds therefore."

ಮಾನ್ಯ ಉಚ್ಛ ನ್ಯಾಯಲಯವು ರಿಟ್ ಅರ್ಜಿ ಸಂ:15077/2020ರಲ್ಲಿ ದಿನಾಂಕ:16.08.2021ರ ಆದೇಶದ ವಿರುದ್ಧ ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಲು ಸರ್ಕಾರದ ಆದೇಶದ ಸಂ:ಆರ್‌ಡಿ 197 ಎಲ್‌ಜಿಎಕ್ಸ್ 2021, ದಿನಾಂಕ:30.12.2021ರಂತೆ ಆದೇಶ ಮಾಡಲಾಗಿರುತ್ತದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ವಕೀಲರು ದಿನಾಂಕ:09.02.2022ರಂದು ಬರೆದಿರುವ ಪತ್ರದಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:16.08.2021ರ ಆದೇಶದಂತೆ ಬಗರ್ ಹುಕ್ಕುಂ ಸಾಗುವಳಿಯ ನಿರ್ಣಯಗಳನ್ನು ರದ್ದುಪಡಿಸಲು ಕೋರಿ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ 1966ರ ನಿಯಮ 108 ಕೆ ರಡಿ ಉಪವಿಭಾಗಾಧಿಕಾರಿಗಳಲ್ಲಿ ದಾಖಲಿಸಲು ಕಾನೂನು ಅಭಿಪ್ರಾಯ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಬಿ ರನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ 18 ಕಿ.ಮೀ. ಅಂತರದಲ್ಲಿರುವ ಭೂಮಿಯನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ರಿಟ್ ಅರ್ಜಿ ಸಂಖ್ಯೆ 15077/2021 ರಲ್ಲಿ ಅರ್ಜಿದಾರರು ಮಂಜೂರಾತಿ ಕೋರಿರುವ ಎಲ್ಲಾ ಭೂಮಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 18 ಕಿ.ಮೀ. ಅಂತರದಲ್ಲಿದ್ದು, ಈ ಹಂತದಲ್ಲಿ ಈ ಹಿಂದೆ ವಿವಿಧ ದಿನಾಂಕಗಳಲ್ಲಿ ಸಮಿತಿ ನಿರ್ಣಯದಂತೆ ಸಾಗುವಳಿ ಚೀಟಿ ವಿತರಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಆದ್ದರಿಂದ ಮಾನ್ಯ ಉಚ್ಛ ನ್ಯಾಯಲಯವು ರಿಟ್ ಅರ್ಜಿ ಸಂ:15077/2020ರಲ್ಲಿ ದಿನಾಂಕ:16.08.2021ರ ಆದೇಶದಂತೆ ರಿಟ್ ಅರ್ಜಿದಾರರಿಗೆ ಈ ಹಿಂದೆ ಅನಧಿಕೃತ ಸಾಗುವಳಿ ಸಕ್ರಮ ಸಮಿತಿಯಲ್ಲಿ ಮಾಡಿರುವ ನಿರ್ಣಯವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ಬಿ ರಡಿ ಮಂಜೂರು ಮಾಡಲು ಅವಕಾಶವಿಲ್ಲವೆಂದು ಸದರಿ ನಿರ್ಣಯವನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1966ರ ನಿಯಮ 108 (ಕೆ) ರಡಿಯಲ್ಲಿ ರದ್ದುಪಡಿಸಲು ಕೋರಿ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರು ದಿನಾಂಕ:15.02.2022ರಂದು ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ ರವರಿಗೆ ಸಲ್ಲಿಸಲಾಗಿದ್ದು, ಪ್ರಸ್ತುತ ಸದರಿಯವರ ನ್ಯಾಯಾಲಯದಲ್ಲಿ ಪ್ರಕರಣವು ಇತ್ಯರ್ಥವಾಗಬೇಕಾಗಿರುತ್ತದೆ.

ಅದರನ್ವಯ ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ ರವರು ತಮ್ಮ ನ್ಯಾಯಾಲಯದಲ್ಲಿ ಪ್ರಕರಣ ಸಂ:ಎಲ್ಎನ್‌ಡಿ/ಆರ್.ಎ(ಎ)/02/21-22 ರಂತೆ ಪ್ರಕರಣವನ್ನು ದಾಖಲಿಸಿಕೊಂಡು, ಸಂಬಂಧಪಟ್ಟವರಿಗೆ ನೋಟಿಸ್ ನೀಡಿ, ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿದ್ದು, ದಿನಾಂಕ:23.03.2022ರ ವಿಚಾರಣೆಯಲ್ಲಿ ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ದಿನಾಂಕ:21.07.2001, 03.01.2003, 04.09.2003, 04.09.2003, 09.01.2003, 03.02.2004, 03.04.2004 ಮತ್ತು 10.07.2012ರ ನಡವಳಿಗೆ ತಡೆಯಾಜ್ಞೆಯನ್ನು ನೀಡಿ, ಆದೇಶಿಸಿರುತ್ತಾರೆ. ಮತ್ತು ಮುಂದಿನ ವಿಚಾರಣೆ ದಿನಾಂಕವನ್ನು ದಿನಾಂಕ: 18.04.2022ಕ್ಕೆ ನಿಗದಿಪಡಿಸಿರುತ್ತಾರೆ.

ಆರ್‌ಡಿ 73 ಎಲ್‌ಜಿಕ್ಯೂ 2022

(ಆರ್.ಅಶೋಕ)
ಕಂದಾಯ ಸಚಿವರು